# ಇಲಿಯಾನಾ ಮನೋನಂದನ

■ ವಿಶಾಖ ಎನ್.

ಬಾಡಿ ಡಿಸ್‌ಮಾರ್ಫಿಕ್ ಡಿಸಾರ್ಡರ್' ಎನ್ನುವುದೊಂದು ಮನೋರೋಗ. ದೇಹದ ಅಂಗಾಂಗಗಳ ಸಣ್ಣಪುಟ್ಟ ಸಮಸ್ಯೆ ಅಥವಾ ಐಬುಗಳನ್ನು ಮನಸ್ಸಿಗೆ ಹಚ್ಚಿಕೊಂಡು ಕೊರಗುವುದಕ್ಕೆ ಹೀಗೆನ್ನುತ್ತಾರೆ. ಉದಾಹರಣೆಗೆ, ಮೂಗಿನ ಮೇಲೊಂದು ಅತಿಸಣ್ಣ ಗುಳ್ಳೆ ಇದೆ ಎಂದುಕೊಳ್ಳಿ. ಅದು ನೋಡುಗರಿಗೆ ಥಟ್ಟನೆ ಕಾಣುವುದಿಲ್ಲ. ಆದರೂ ಕನ್ನಡಿ ಮುಂದೆ ನಿಂತು ಆ ಗುಳ್ಳೆಯನ್ನೇ ಪದೇ ಪದೇ ನೋಡಿಕೊಂಡು ಕೊರಗುವುದು 'ಬಾಡಿ ಡಿಸ್‌ಮಾರ್ಫಿಕ್ ಡಿಸಾರ್ಡರ್'. ಇದನ್ನು ದೇಹದ ಯಾವುದೇ ಅಂಗಗಳಿಗೂ ಅನ್ವಯಿಸಿ ಹೇಳಬಹುದು.

ನಟಿ ಇಲಿಯಾನಾ ಡಿ ಕ್ರೂಸ್ ಅವರಿಗೂ ಇಂತಹದೊಂದು ಮನೋರೋಗ ಇತ್ತಂತೆ. ಹನ್ನೆರಡನೇ ವಯಸ್ಸಿನಿಂದಲೂ ದೇಹಮೋಹಿಯಾದ ಅವರನ್ನು ಈ ಸಮಸ್ಯೆ ಬಹುವಾಗಿ ಕಾಡಿತ್ತಂತೆ. ಆಮೇಲೆ ಅದರಿಂದ ಹೊರಬಂದದ್ದೇ ದೊಡ್ಡ ವಿಷಯ ಎಂದು ಅವರು ಹೇಳಿಕೊಂಡಿದ್ದರು. ಅದಲ್ಲದೆ ಒಮ್ಮೆ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಮನಸ್ಸು ಕಲ್ಲವಿಲಗೊಂಡಿತ್ತೆಂದೂ ಅನುಭವ ಹಂಚಿಕೊಂಡಿದ್ದರು. ಆದರೆ, 'ಬಾಡಿ ಡಿಸ್‌ಮಾರ್ಫಿಂಗ್ ಡಿಸಾರ್ಡರ್'ಗೂ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಅನ್ನಿಸಲು ಕಾರಣವಾದ ಪ್ರಕರಣಕ್ಕೂ ಸಂಬಂಧವಿಲ್ಲ ಎಂದು ಅವರು ಈಚೆಗೆ ಸ್ಪಷ್ಟನೆ ನೀಡಿದರು. ಯಾರೋ ಸುದ್ದಿಮಿತ್ರರೂ ಇವೆರಡಕ್ಕೂ ಸಂಬಂಧವಿದೆ ಎಂದು ಬರೆದಿದ್ದರಿಂದ ಅವರು ಇನ್‌ಸ್ಟಾಗ್ರಾಂನಲ್ಲಿ ಲೈವ್ ಬಂದು ಸ್ಪಷ್ಟಪಡಿಸಬೇಕಾಯಿತು. ■



# ರಾಮ್‌ಚರಣ್ ಕಿವಿಮಾತು

ದಕ್ಷಿಣ ಭಾರತದ ಸಿನಿಮಾಗಳು ಕೋವಿಡ್ ನಂತರದ ಕಾಲದಲ್ಲಿ ಸಂಚಲನ ಮೂಡಿಸುತ್ತಿರುವುದನ್ನು ನೋಡಿ ಸಲ್ಮಾನ್ ಖಾನ್ ಕೂಡ ದಂಗಾಗಿದ್ದರು. 'ರಾಜಮೌಳಿ ಸಿನಿಮಾವನ್ನು ಇಡೀ ಭಾರತೀಯರು ನೋಡುತ್ತಾರೆ. ಅದೇ ನಮ್ಮ ಸಿನಿಮಾಗಳನ್ನು ದಕ್ಷಿಣದವರು ಯಾಕೋ ಅಷ್ಟಾಗಿ ನೋಡುವುದಿಲ್ಲ' ಎಂಬರ್ಥದಲ್ಲಿ ಪ್ರತಿಕ್ರಿಯಿಸಿದ್ದರು. 'ಆರ್‌ಆರ್‌ಆರ್' ಚಿತ್ರದ ಕೆಲಸದ ಕುರಿತ ಮೆಚ್ಚುಗೆಯೂ ಅವರ ಮಾತಿನಲ್ಲಿತ್ತು. ರಾಮ್‌ಚರಣ್, ಜೂನಿಯರ್ ಎನ್‌ಟಿಆರ್ ಪ್ರತಿಭೆಯನ್ನೂ ಕೊಂಡಾಡಿದ್ದರು.

ಸಲ್ಮಾನ್ ಖಾನ್ ಮಾತಿಗೆ ತೆಲುಗು ನಟ ರಾಮ್‌ಚರಣ್ ಸಂದರ್ಶನವೊಂದರಲ್ಲಿ ನೀಡಿರುವ ಪ್ರತಿಕ್ರಿಯೆ: 'ಎಲ್ಲವೂ ನಿರ್ದೇಶಕರ ಬರವಣಿಗೆಯಲ್ಲಿ ಇರುತ್ತದೆ. ಚಿತ್ರಕಥಾ ಹಂದರ ಚೆನ್ನಾಗಿ ಇದ್ದರೆ ದೇಶದ ಯಾರು ಬೇಕಾದರೂ ನೋಡುತ್ತಾರೆ.'

'ಸಿನಿಮಾ ತಯಾರಿಸುವಾಗ ನಮ್ಮ ಟಾರ್ಗೆಟ್ ಆಡಿಯೆನ್ಸ್ ಅವರು, ಇವರು ಎಂದು ಸೀಮಿತವಾಗಿ ಯೋಚಿಸುವುದು ಮೊದಲಿನಿಂದ ಇತ್ತು. ಈಗ ರಾಜಮೌಳಿ ಅವರಂಥವರು ಗಡಿಯನ್ನು ಮೀರಿ ಯೋಚಿಸುತ್ತಿದ್ದಾರೆ. ವಿಜಯೇಂದ್ರ ಪ್ರಸಾದ್ ಅವರಂಥವರು ಗಟ್ಟಿ ಕಥೆಗಳನ್ನು ಕೊಡುತ್ತಾರೆ. ಪಾತ್ರಗಳ ಬರವಣಿಗೆ ಕೂಡ ಎಲ್ಲರೂ ನೋಡಿಸಿಕೊಳ್ಳುವಂತೆ ಇರುತ್ತದೆ. ಹೀಗಾಗಿಯೇ ಇಂತಹ ಚಿತ್ರಗಳು ದೇಶದ ಉದ್ದಗಲ ಎಲ್ಲ ಪ್ರೇಕ್ಷಕರನ್ನೂ ಆಕರ್ಷಿಸುತ್ತವೆ' ಎನ್ನುವುದು ರಾಮ್‌ಚರಣ್ ವಿಶ್ಲೇಷಣೆ.

ಹಿಂದಿ ಭಾಷೆಯಲ್ಲಿ ಸಿನಿಮಾ ಮಾಡುವ ನಿರ್ದೇಶಕರೂ ತಮ್ಮ ಗಡಿ ಮೀರಿ ಆಲೋಚಿಸಿದರೆ ಪ್ಯಾನ್–ಇಂಡಿಯಾ ಸಿನಿಮಾ ಮಾಡಲು ಸಾಧ್ಯವಿದೆ. ದಕ್ಷಿಣ ಭಾರತದವರನ್ನು ಕೂಡ ಕಥನಗಳು, ಪಾತ್ರಗಳ ಮೂಲಕ ಹಿಡಿದಿಡಬಲ್ಲ ಆಲೋಚನೆಯನ್ನು ನಿರ್ದೇಶಕರು, ಚಿತ್ರಕಥಾ ಬರಹಗಾರರು ಮಾಡಬೇಕೆನ್ನುವುದು ಅವರ ಕಿವಿಮಾತು.

ದಕ್ಷಿಣ ಭಾರತದವರು ಯಾಕೆ ತಮ್ಮ ಸಿನಿಮಾಗಳನ್ನು ಹೀಗೆ ನೋಡುವುದಿಲ್ಲ ಎಂಬ ಸಲ್ಮಾನ್ ಖಾನ್ ಪ್ರಶ್ನೆಯಲ್ಲಿನ ಕಾಳಜಿಯನ್ನು ರಾಮ್‌ಚರಣ್ ಗುರುತಿಸಿದ್ದಾರೆ. ಇದರಲ್ಲಿ ಸಲ್ಮಾನ್ ಅವರಂತಹ ನಟರ ತಪ್ಪು ಏನೇನೂ ಇಲ್ಲ. ಅವರನ್ನು ಹಾಕಿಕೊಂಡು ಚಿತ್ರಗಳನ್ನು ಮಾಡುವ ನಿರ್ದೇಶಕರು ಸೀಮಿತ ಚೌಕಟ್ಟನ್ನು ಮೀರಬೇಕಷ್ಟೆ ಎಂದು ಸಲಹೆ ನೀಡಿದ್ದಾರೆ. 'ಆರ್‌ಆರ್‌ಆರ್' ಸಿನಿಮಾ 1000 ಕೋಟಿ ರೂಪಾಯಿ ಗಳಿಕೆಯ ಗಡಿ ಮೀರಿರುವುದಾಗಿ ಅಧಿಕೃತವಾಗಿ ಘೋಷಿಸಿದ್ದರಿಂದ ತೆಲುಗು ನಟನ ಮಾತನ್ನು ಹಿಂದಿ ಚಿತ್ರೋದ್ಯಮಿಗಳು ಗಂಭೀರವಾಗಿ ಪರಿಗಣಿಸುವ ಸಾಧ್ಯತೆ ಇದೆ. ■

